(೭೦)

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/23/2015-16 ದಿ:25-05-2016

ವಾದಿಗಳು — ವಿರುದ್ಧ — ಪ್ರತಿವಾದಿಗಳು

ಎ.ಕೆ.ಹಾಳು ರತ್ನಮ್ಮ ಗಂಡ ಹುಸೇನಪ್ಪ
ಸಿದ್ದಲಿಂಗಮ್ಮ ಗಂಡ ಲೇಟ್ ಅಯ್ಯಪ್ಪ.
ಉಮಾದೇವಿ ಮೈ/ಗಾ ತಾಯಿ ಸಿದ್ದಲಿಂಗಮ್ಮ ಗಂಡ ಅಯ್ಯಪ್ಪ.
ಅಗಸನೂರು ಗ್ರಾಮ

ರತ್ನಮ್ಮ & ಹುಸೇನಪ್ಪ ತಂದೆ ಮುದುಕಪ್ಪ
ಅಗಸನೂರು ಗ್ರಾಮ.

ವಿವಾದಿತ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಅಗಸನೂರು | 135 | 3-15 | ಖುಷ್ಕಿ-ತರಿ |

ಪೀಠಿಕೆ:-

ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ.ನಂ. 135 ವಿ:3-15 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಅಕ್ಕತಂಗಿಯರಹಾಳು ರತ್ನಮ್ಮ ಗಂಡ ಹುಸೇನಪ್ಪ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರ ಕುಟುಂಬದವರು ದಿ:25-03-2015 ರಂದು ಮಾಡಿಕೊಂಡ ಪಾಲು ವಿಭಾಗ ಪ್ರಕಾರ ಮತ್ತು 11-ಇ ನಕ್ಷೆ ಅನ್ವಯ ಹಕ್ಕು ಪಡೆದ ಅಕ್ಕತಂಗಿಯರಹಾಳು ರತ್ನಮ್ಮ ಗಂಡ ಹುಸೇನಪ್ಪ ವಿ:1-58, ಸಿದ್ದಲಿಂಗಮ್ಮ ಗಂಡ ಲೇಟ್ ಅಯ್ಯಪ್ಪ ಮತ್ತು ಉಮಾದೇವಿ ಮೈ/ಗಾ ತಾಯಿ ಸಿದ್ದಲಿಂಗಮ್ಮ ಗಂಡ ಲೇಟ್ ಅಯ್ಯಪ್ಪ ಜಂಟಿ ವಿ:1-57 ಎಕ್ರೆ ಜಮೀನಿಗೆ, ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ಅದರಂತೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಅಗಸನೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಹಾಲಿ ಪಟ್ಟಾದಾರಳಾದ ರತ್ನಮ್ಮ ಮತ್ತು ಇವರ ಪತಿ ಹುಸೇನಪ್ಪ ತಂದೆ ಮುದುಕಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:24-08-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:03/2015-16 ದಿ:25-08-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:17-10-2015 ರಿಂದ 18-04-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿಗಳ ಪೈಕಿ ಸಿದ್ದಲಿಂಗಮ್ಮ ಹಾಗೂ ಇವರ ಪರ ವಕೀಲರು ಮತ್ತು ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

(68)

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ವಕೀಲರ ಲಿಖಿತ ೇಳಿಕೆ ಪ್ರಕಾರ ಸದ್ರಿ ಜಮೀನನ್ನು ನೋಂದಣಿ ಕ್ರಯಪತ್ರ ಸಂಖ್ಯೆ:234/1981-82 ದಿ:15-05-1981 ರ ಪ್ರಕಾರ ೆ.ಹಾಳು ರತ್ನಮ್ಮ ವುರುಫ್ ಪಾರ್ವತಮ್ಮ ಗಂಡ ಹುಸೇನಪ್ಪ ಇವರು ಕ್ರಯ ಹೊಂದಿದ್ದು, ಸದ್ರಿ ಜಮೀನು ವರಿಗೆ ಮಾತ್ರ ಸಂಬಂಧಿಸಿರುತ್ತದೆ, ದಿ:25-03-2015 ರಂದು ಮಾಡಿಕೊಂಡ ಪಾಲು ವಿಭಾಗ ಪತ್ರವು ಸ್ಥಿಸಿಕೊಂಡಿದ್ದಾಗಿದೆ ಎಂದು ಮತ್ತು ಸಿವಿಲ್ ನ್ಯಾಯಾಲದ ಮೊರೆ ಹೋಗಲು ವಾದಿ (2) ರವರಿಗೆ ತಿಳಿಸಲು ೇರಿ ಪ್ರಸ್ತುತ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ತಿಳಿಸಿರುತ್ತಾರೆ.

ಒಟ್ಟಾರೆ ಅಗಸನೂರು ಗ್ರಾಮ ಸ,ನಂ.135 ವಿ:3-15 ಎಕ್ರೆ ಜಮೀನಿಗೆ ಸಂಭಂದಿಸಿ, ಹಾಜರುಪಡಿಸಿದ ಾಖಲೆ ಪರಿಶೀಲಿಸಲಾಗಿ, ಮತ್ತು ವಾದಿ, ಪ್ರತಿವಾದಿಗಳ ವಾದ ಆಲಿಸಲಾಗಿ, ಸದ್ರಿ ಪ್ರಕರಣವು ಸಿವಿಲ್ ರೂಪವೆಂದು ಪರಿಗಣಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಲು ಹಾಗೂ ಸಕ್ಷಮ ನ್ಯಾಯಾಲಯದ ೊರೆಹೋಗಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಈ ಕೆಳಕಂಡ ಆದೇಶ-

**ಂ.ಕಂ/ಹಬ/ವಿವಾದ/23/2015-16** **ದಿ:25-05-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ಾಲೂಕು ಅಗಸನೂರು ಗ್ರಾಮದ ಸ,ನಂ. 135 ವಿ:3-15 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಕ್ಕತಂಗಿಯರಹಾಳು ರತ್ನಮ್ಮ ಗಂಡ ಹುಸೇನಪ್ಪ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರ ಕುಟುಂಬದವರು ಿನಾಂಕ:25-03-2015 ರಂದು ಮಾಡಿಕೊಂಡ ಪಾಲು ವಿಭಾಗ ಪ್ರಕಾರ ಮತ್ತು 11-ಇ ನಕ್ಷೆ ಅನ್ವಯ ಸದ್ರಿ ಕ್ಕು ಬದಲಾವಣೆಗೆ ತಮ್ಮ ಒಪ್ಪಿಗೆ ಇರುವುದಿಲ್ಲವೆಂದು ಹಾಲಿ ಪಟ್ಟಾದಾರಳು ಮತ್ತು ಇವರ ಪತಿ ಹುಸೇನಪ್ಪ ವರು ತಿಳಿಸಿದ ಮೇರೆಗೆ, ಸದ್ರಿ ಪ್ರಕರಣವು ಸಿವಿಲ್ ಸ್ವರೂಪವೆಂದು ಪರಿಗಣಿಸಿ, ಸಕ್ಷಮ ನ್ಯಾಯಾಲಯದ ೊರೆಹೋಗಿ ಪರಿಹಾರ ಕಂಡುಕೊಳ್ಳಲು ಉಭಯತರಿಗೂ ಸೂಚಿಸಿ, ಪ್ರಕರಣವನ್ನು ಈ ಹಂತದಲ್ಲಿ ುಕ್ತಾಯಗೊಳಿಸಲು ಮತ್ತು ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾರೀತಿ ಮುಂದುವರೆಸಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಕರ್ನಾಟಕ ಸರ್ಕಾರ
ಸಿರುಗುಪ್ಪ
ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ